ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	168(226)
ಮಾನ್ಯ ಸದಸ್ಯರ ಹೆಸರು	:	ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	02-02-2021
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದ ವಿವಿಧ ನಗರಗಳಲ್ಲಿ ತ್ಯಾಜ್ಯ ವಸ್ತುಗಳ ನಿರ್ವಹಣಾ ವ್ಯವಸ್ಥೆಗಳನ್ನು ನಿರ್ವಹಿಸುತ್ತಿರುವ ಪದ್ಧತಿಗಳಾವುವು?	ರಾಜ್ಯದ ನಗರಸ್ಥಳೀಯ ಸಂಸ್ಥೆಗಳಲ್ಲಿ ಘನ ತ್ಯಾಜ್ಯ ನಿರ್ವಹಣೆ ನಿಯಮಗಳು 2016ರ ರೀತ್ಯಾ ಈ ಕೆಳಕಂಡ ಪದ್ಧತಿಯನ್ನು ಅನುಸರಿಸಿ ತ್ಯಾಜ್ಯವನ್ನು ನಿರ್ವಹಿಸಲಾಗುತ್ತಿದೆ. • ಮೂಲದಲ್ಲಿಯೆ ತ್ಯಾಜ್ಯವನ್ನು ಹಸಿ ಹಾಗೂ ಒಣ ಕಸ ಎಂದು ವಿಂಗಡಿಸುವುದು. • ಹಸಿಕಸವನ್ನು ಕಾಂಪೋಸ್ಟಿಂಗ್ (ವಿಂಡ್ರೋ ಕಾಂಪೋಸ್ಟಿಂಗ್, ವರ್ಮಿ ಕಾಂಪೋಸ್ಟಿಂಗ್, ಪೈಪ್-ಕಾಂಪೋಸ್ಟಿಂಗ್, ಬಿದಿರು-ಕಾಂಪೋಸ್ಟಿಂಗ್) ಬಯೋ-ಗ್ಯಾಸ್ ಪದ್ಧತಿ ಮೂಲಕ ನಿರ್ವಹಿಸುವುದು. • ಒಣ ತ್ಯಾಜ್ಯವನ್ನು ಆರ್.ಡಿ.ಎಫ್, ವೇಸ್ಟ್ ಟು ಎನರ್ಜಿ ಮುಂತಾದ ಪದ್ಧತಿ ಮೂಲಕ ನಿರ್ವಹಿಸುವುದು.
ಆ	ನಗರಗಳ ವಿಸ್ತರಣೆಯಿಂದ ತ್ಯಾಜ್ಯ ಸಂಗ್ರಹ ಮತ್ತು ವಿಸರ್ಜನೆಗೆ ಗುರುತಿಸುತ್ತಿರುವ ಸ್ಥಳಗಳ ಸುಧಾರಣೆ ಬಗ್ಗೆ ಸರ್ಕಾರ ಯಾವ ಸುಧಾರಿತ ಕ್ರಮಗಳನ್ನು ಅನುಸರಿಸುತ್ತಿದೆ.	ನಗರ ಪ್ರದೇಶದಲ್ಲಿ ಘನತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಜಾಗಗಳನ್ನು, ಈ ಹಿಂದಿನ ಪೌರಘನತ್ಯಾಜ್ಯ ವಸ್ತುಗಳು (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮಗಳು 2000 ರ ರೀತ್ಯಾ ಗುರುತಿಸಿ ಅಭಿವೃದ್ಧಿ ಪಡಿಸಲಾಗಿರುತ್ತದೆ. ಪ್ರಸ್ತುತ ಜಾರಿಯಲ್ಲಿರುವ ಘನತ್ಯಾಜ್ಯ ನಿರ್ವಹಣೆ ನಿಯಮಗಳು 2016 ರಲ್ಲಿ ತಿಳಿಸಿರುವಂತೆ ಸರ್ಕಾರದ ವತಿಯಿಂದ ರಾಜ್ಯ ನಗರ ಘನತ್ಯಾಜ್ಯ ನಿರ್ವಹಣೆ ಕಾರ್ಯನೀತಿ-2020 ಮತ್ತು ಕಾರ್ಯತಂತ್ರ-2020 ಮತ್ತು ಘನತ್ಯಾಜ್ಯ ನಿರ್ವಹಣೆ ಮಾದರಿ ಬೈಲಾ ವನ್ನು ಜಾರಿಗೆ ತಂದಿದ್ದು ಅವುಗಳ ರೀತ್ಯಾ ಈ ಕೆಳಕಂಡಂತೆ ಕ್ರಮ ವಹಿಸಲಾಗಿರುತ್ತದೆ. • ಸದರಿ ಜಾಗಗಳಲ್ಲಿ ಸಂಪರ್ಕ ರಸ್ತೆ, ಕಾಂಪೌಂಡ್ ಗೋಡೆ, ಗೇಟ್, ಕಾವಲುಗಾರರ ಕೊಠಡಿ, ಸುತ್ತಲೂ ಗಿಡಮರಗಳನ್ನು ಬೆಳೆಸುವುದು, ಆಂತರಿಕ ರಸ್ತೆಗಳ ನಿರ್ಮಾಣ, ಮಳೆ ನೀರು ಚರಂಡಿಗಳ ನಿರ್ಮಾಣ ಮುಂತಾದ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. • ತ್ಯಾಜ್ಯ ಸಂಸ್ಕರಣೆಗಾಗಿ ವಿಂಡ್ರೋ ಕಾಂಪೋಸ್ಟಿಂಗ್, ವರ್ಮಿ ಕಾಂಪೋಸ್ಟಿಂಗ್, ಬಯೋಗ್ಯಾಸ್ ಮುಂತಾದ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. • ಗೊಬ್ಬರದಿಂದ ನಿಸತ್ವ ತ್ಯಾಜ್ಯವನ್ನು ಬೇರ್ಪಡಿಸಲು ವಿವಿಧ ಸಾಮರ್ಥ್ಯದ ಟ್ರಾಮೆಲ್ ಸ್ಕ್ರೀನ್ ಗಳು, ಬೆಲ್ಟ್ ಕನ್ವೇಯರ್‌ಗಳು ಮುಂತಾದ ಯಂತ್ರೋಪಕರಣಗಳನ್ನು ಅಳವಡಿಸಲಾಗುತ್ತಿದೆ. • ಹಲವು ನಗರಗಳ ನೆಲಭರ್ತಿ ಜಾಗಗಳಲ್ಲಿ ಬಹಳ ವರ್ಷಗಳಿಂದ

		ಸಂಗ್ರಹವಾಗಿರುವ ಪಾರಂಪರಿಕ ತ್ಯಾಜ್ಯವನ್ನು (Legacy waste) ಹೊರತೆಗೆದು Biomining ಹಾಗು Bioremediation ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ. • ಒಣ ತ್ಯಾಜ್ಯ ನಿರ್ವಹಣೆಗಾಗಿ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. • ನಗರಗಳು ಬಹಳ ವೇಗವಾಗಿ ಬೆಳೆಯುತ್ತಿರುವುದರಿಂದ ನೆಲಭರ್ತಿ ಜಾಗಗಳ ಮೇಲೆ ಉಂಟಾಗುವ ಹೆಚ್ಚುಹೊರೆಯನ್ನು ತಗ್ಗಿಸಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ➢ (Reduce, Reuse & Recycle of Waste (3Rs) ಬಗ್ಗೆ ಸಾರ್ವಜನಿಕರಿಗೆ, ವಿವಿಧ ತ್ಯಾಜ್ಯ ಉತ್ಪಾದಕರಿಗೆ ನಿರಂತರ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ➢ ಮೂಲದಲ್ಲಿಯೆ ತ್ಯಾಜ್ಯ ವಿಂಗಡಣೆಯನ್ನು ಕಡ್ಡಾಯಗೊಳಿಸಿ, ಉಲ್ಲಂಘಿಸಿದವರಿಗೆ ದಂಡ ವಿಧಿಸುವುದು. ➢ ವಾರ್ಡ್ / ಸಮುದಾಯ ಮಟ್ಟದಲ್ಲಿ ವಿಕೇಂದ್ರೀಕ್ರತ ಹಸಿ/ಒಣತ್ಯಾಜ್ಯ ಸಂಸ್ಕರಣಾ/ನಿರ್ವಹಣಾ ಘಟಕಗಳನ್ನು ಸ್ಥಾಪಿಸುವುದು. ➢ ಬೃಹತ್ ತ್ಯಾಜ್ಯ ಉತ್ಪಾದಕರು ತಮ್ಮ ಆವರಣದಲ್ಲಿಯೇ ಜಾಗ ಲಭ್ಯವಿದ್ದಲ್ಲಿ ತ್ಯಾಜ್ಯವನ್ನು ಸಂಸ್ಕರಣೆ ಮಾಡುವಂತೆ ಸೂಚನೆ ನೀಡುವುದು.
ಇ	ಈ ಕುರಿತು ಬೆಂಗಳೂರಿನ ಅನುಭವಗಳಿಂದ ಕಲಿತಿರುವ ಪಾಠಗಳೇನು? ಇದರ ಬಗ್ಗೆ ಸುಧಾರಣಾ ಕ್ರಮಗಳೇನು?	• ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಬೃಹತ್ ಪ್ರಮಾಣದ ತ್ಯಾಜ್ಯವನ್ನು ಮೂಲದಲ್ಲಿಯೆ ವಿಂಗಡಣೆ ಮಾಡಲು ಸಾಧ್ಯವಾಗದೇ ಮಿಶ್ರ ತ್ಯಾಜ್ಯವನ್ನು ಕೇಂದ್ರೀಕೃತ ತ್ಯಾಜ್ಯ ಸಂಸ್ಕರಣೆ ಸೌಲಭ್ಯಗಳಿಗೆ ಸಾಗಣೆ ಮಾಡಿದ್ದು, ಬೃಹತ್ ಪ್ರಮಾಣದ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಲು ಸಾಧ್ಯವಾಗಿರುವುದಿಲ್ಲ. • ಇದರಿಂದಾಗಿ ಬೆಂಗಳೂರು ತ್ಯಾಜ್ಯ ಸಂಸ್ಕರಣೆ ಪ್ರದೇಶದ ಸುತ್ತ ಮುತ್ತಲಿನ ಸ್ಥಳೀಯರಿಗೆ ತೊಂದರೆಯುಂಟಾಗಿ, ಸಾರ್ವಜನಿಕರ ಪ್ರತಿರೋದಕ್ಕೆ ಕಾರಣವಾಗಿರುತ್ತದೆ. • ತ್ಯಾಜ್ಯ ಸಂಸ್ಕರಣೆಗೆ ಸೂಕ್ತ ಜಾಗ ಲಭ್ಯವಿಲ್ಲದಿರುವುದರಿಂದ ಬೆಂಗಳೂರಿನ ವಿವಿಧ ವಾರ್ಡ್‌ಗಳಲ್ಲಿ ವಿಕೇಂದ್ರೀಕೃತ ಮಾದರಿಯಲ್ಲಿ ಹಸಿ ತ್ಯಾಜ್ಯವನ್ನು ಹಾಗು ಒಣ ತ್ಯಾಜ್ಯವನ್ನು ಸಂಸ್ಕರಣೆ ಮಾಡಲಾಗುತ್ತಿದೆ. • ರಾಜ್ಯದ ಇತರೆ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಮೂಲದಲ್ಲಿಯೇ ಬೇರ್ಪಡಿಸಿ, ಹಸಿ ತ್ಯಾಜ್ಯವನ್ನು ಮಾತ್ರ ತ್ಯಾಜ್ಯ ಸಂಸ್ಕರಣಾ ಸೌಲಭ್ಯಕ್ಕೆ ಸಾಗಣೆ ಮಾಡಲು ತಿಳಿಸಲಾಗಿರುತ್ತದೆ. ನಗರ ವ್ಯಾಪ್ತಿಯಲ್ಲಿ ಸಂಸ್ಕರಣೆ ಸೌಲಭ್ಯಕ್ಕೆ ಸಾಗಿಸಿ ಗೊಬ್ಬರವಾಗಿ ಪರಿವರ್ತಿಸಲು ತಿಳಿಸಲಾಗಿರುತ್ತದೆ ಹಾಗು ನಗರ ವ್ಯಾಪ್ತಿಯಲ್ಲಿ ಲಭ್ಯವಿರುವ

		ಸ್ಥಳಗಳಲ್ಲಿ ಒಣ ತ್ಯಾಜ್ಯ ಸಂಗ್ರಹಣೆ ಕೇಂದ್ರಗಳನ್ನು ಸ್ಥಾಪಿಸಿಕೊಂಡು ಒಣ ತ್ಯಾಜ್ಯವನ್ನು ಮುನರ್ಬಳಕೆಯಾಗುವ ತ್ಯಾಜ್ಯ, ಮುನರ್ಬಳಕೆಯಾಗದ ದಹನಯೋಗ್ಯ ತ್ಯಾಜ್ಯ, ನಿಸತ್ವ ತ್ಯಾಜ್ಯ ಗಳಾಗಿ ಪರಿವರ್ತಿಸಿ ಸಾಧ್ಯವಾದಷ್ಟು ನೆಲಭರ್ತಿ ಜಾಗಗಳಿಗೆ ಹೋಗುವುದನ್ನು ತಗ್ಗಿಸಲು ತಿಳಿಸಲಾಗಿರುತ್ತದೆ. • ಮೂಲದಲ್ಲಿ ತ್ಯಾಜ್ಯ ವಿಂಗಡಿಸದಿರುವವರ ವಿರುದ್ಧ ದಂಡ ವಿಧಿಸಲು ತಿಳಿಸಲಾಗಿರುತ್ತದೆ. ಇದಕ್ಕಾಗಿ ರಾಜ್ಯ ಸರ್ಕಾರದಿಂದ ಘನತ್ಯಾಜ್ಯ ನಿರ್ವಹಣೆ ಮಾದರಿ ಬೈಲಾ ಗಳನ್ನು ಜಾರಿಗೊಳಿಸಲಾಗಿರುತ್ತದೆ. • ಕೇಂದ್ರ ಸರ್ಕಾರವು, ಬೆಂಗಳೂರು ಹಾಗು ಇತರೆ ರಾಜ್ಯಗಳಲ್ಲಿ ಅನುಸರಿಸುತ್ತಿರುವ ವಿಕೇಂದ್ರೀಕೃತ ತ್ಯಾಜ್ಯ ಸಂಸ್ಕರಣಾ ವಿಧಾನಗಳುಳ್ಳ ಕೈಪಿಡಿಯನ್ನು ಜಾರಿಗೆ ತಂದಿದ್ದು, ಅದರ ರೀತ್ಯಾ ವಾರ್ಡ್/ಸಮುದಾಯ ಮಟ್ಟದಲ್ಲಿಯೆ ಹಸಿ/ಒಣತ್ಯಾಜ್ಯ ಸಂಸ್ಕರಣಾ/ನಿರ್ವಹಣಾ ಘಟಕಗಳನ್ನು ಸ್ಥಾಪಿಸಿ ಸಂಸ್ಕರಣೆ ಮಾಡಲು ತಿಳಿಸಲಾಗಿರುತ್ತದೆ. • ಘನತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡಲು ಸಾರ್ವಜನಿಕರ ಸಹಬಾಗಿತ್ವ ಅತ್ಯಗತ್ಯವಿದ್ದು, ಸಾರ್ವಜನಿಕರಿಗೆ ಅರಿವು ಮೂಡಿಸಲು ಐ.ಇ.ಸಿ ಚಟುವಟಿಕೆಗಳನ್ನು ಕೈಗೊಳ್ಳಲು ತಿಳಿಸಲಾಗಿರುತ್ತದೆ.

ಸಂಖ್ಯೆ: ನಅಇ 21 ಸಿಎಸ್‌ಎಸ್ 2021

(ಭೈರತಿ ಬಸವರಾಜು)
ನಗರಾಭಿವೃದ್ಧಿ ಸಚಿವರು.